ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ತಹಶೀಲ್ದಾರರವರ ನ್ಯಾಯಾಲಯ ಕೂಡ್ಲಿಗಿ

ಸಂ/ಕಂ/ಪಹಣಿ:ವಿವಾದ/15/2015-16 ದಿನಾಂಕ: 28-06-2016.

| ವಾದಿಗಳು | ಪ್ರತಿವಾದಿಗಳು |
|---|---|
| ಕರಿಬಸವರಾಜ ತಂದೆ ಲೇಟ್ ಬಂಡ್ರಿ ಚಿನ್ನಣ್ಣ<br>01 ನೇ ವಾರ್ಡ ಬಾಪೂಜಿ ನಗರ<br>ಕೂಡ್ಲಿಗಿ ಪಟ್ಟಣ<br>ಕೂಡ್ಲಿಗಿ ತಾಲೂಕು | ಬಣಕಾರ ನಾಗಮ್ಮ ಗಂಡ ಲೇಟ್ ಪಾಲಯ್ಯ<br>ಮೊರಬಾನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಅಮ್ಮನಕೇರಿ ಗ್ರಾಮದ ಸನಂ 261ಬಿ. ವಿಸ್ತೀರ್ಣ 1-56. ಎಕ್ರೆ ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಅಮ್ಮನಕೇರಿ ಗ್ರಾಮದ ಸನಂ 261ಬಿ. ವಿಸ್ತೀರ್ಣ 1-56. ಎಕ್ರೆ ಜಮೀನನ್ನು ಸದರಿ ತಾಲೂಕು ಮೊರಬಾನಹಳ್ಳಿ ಗ್ರಾಮದ ಬಣಕಾರ ನಾಗಮ್ಮ ಗಂಡ ಲೇಟ್ ಬಣಕಾರ ಪಾಲಯ್ಯ ಇವರಿಂದ ಸದರಿ ತಾಲೂಕು ಕೂಡ್ಲಿಗಿ ಪಟ್ಟಣದ ಕರಿಬಸವರಾಜ ತಂದೆ ಬಂಡ್ರಿ ಚಿನ್ನಣ್ಣ ಇವರು ದಿನಾಂಕ 23-06-2014 ರ ಡಾಕ್ಯುಮೆಂಟ್ ನಂಬರ್: 998/2014-15. ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಅಮ್ಮನಕೇರಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 27-06-2014 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ವಿಕ್ರಯದಾರರು ನಮೂನೆ-21 ಕ್ಕೆ ಸಹಿ ಮಾಡಿಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 34/2013-14. ದಿನಾಂಕ 24-07-2014 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 08-07-2015 ರಿಂದ 28-06-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಅಮ್ಮನಕೇರಿ ಗ್ರಾಮದ ಸನಂ 261ಬಿ. ವಿಸ್ತೀರ್ಣ 1-56. ಎಕ್ರೆ ಜಮೀನನ್ನು ಸದರಿ ತಾಲೂಕು ಮೊರಬಾನಹಳ್ಳಿ ಗ್ರಾಮದ ಬಣಕಾರ ನಾಗಮ್ಮ ಗಂಡ ಲೇಟ್ ಬಣಕಾರ ಪಾಲಯ್ಯ ಇವರಿಂದ ದಿನಾಂಕ 23-06-2014 ರ ಡಾಕ್ಯುಮೆಂಟ್ ನಂಬರ್: 998/2014-15 ರ ಪ್ರಕಾರ ರೂ: 71.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತೇನೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನ ಬಗ್ಗೆ ಉಭಯರು ರಾಜಿಯಾಗಿ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಯಾವ ಆಕ್ಷೇಪಣೆಗಳು ಇಲ್ಲವೆಂದು ಹೇಳಿಕೆಯನ್ನು ನೀಡಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಅಮ್ಮನಕೇರಿ ಗ್ರಾಮದ ಸನಂ 261ಬಿ. ವಿಸ್ತೀರ್ಣ 1-56. ಎಕ್ರೆ ಜಮೀನನ್ನು ದಿನಾಂಕ 23-06-2014 ರ ಡಾಕ್ಯುಮೆಂಟ್ ನಂಬರ್: 998/2014-15 ರ ಕ್ರಯ ದಸ್ತಾವೇಜು ಪ್ರಕಾರ ಕ್ರಯದಾರರಾದ ಹಾಗೂ ಅರ್ಜಿದಾರರಾದ ಕರಿಬಸವರಾಜ ತಂದೆ ಲೇಟ್ ಬಂಡ್ರಿ ಚಿನ್ನಣ್ಣ ಕೂಡ್ಲಿಗಿ ಪಟ್ಟಣ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 28-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು, ಕೂಡ್ಲಿಗಿ.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕರಿಬಸವರಾಜ ತಂದೆ ಲೇಟ್ ಬಂಡ್ರಿ ಚಿನ್ನಣ್ಣ 01 ನೇ ವಾರ್ಡ ಬಾಪೂಜಿ ನಗರ ಕೂಡ್ಲಿಗಿ ಪಟ್ಟಣ ಕೂಡ್ಲಿಗಿ ತಾಲ್ಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಬಣಕಾರ [illegible] ಗಂಡ ಲೇಟ್ ಬಣಕಾರ ಪಾಲಯ್ಯ ಮೊರಬಾನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

ದೃಢೀಕೃತ ನಕಲು

ಶಿರಸ್ತೇದಾರರು
ತಾಲ್ಲೂಕು ಕಛೇರಿ
ಕೂಡ್ಲಿಗಿ.